ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2014–15 : ದಿನಾಂಕ: 22–11–2014

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | Press Conference regarding First Common wealth Science Conference in Bangalore<br><br>R.S.V.P. for Vehicle :<br>Mr Sachin Belvadi<br>9448287705 | 24–11–2014<br>Monday<br>at<br>10-30 AM | J.C. Bose Room,<br>Jawaharlal Nehru Centre for Advanced Scientific Research<br>Jakkur Post<br>Bangalore-560 064 |

ನಿರ್ದೇಶಕರ ಪರವಾಗಿ

## ಪತ್ರಿಕಾ ಪ್ರಕಟಣೆ

## ರಾಯಚೂರು ವೈದ್ಯಕೀಯ ವಿಜ್ಞಾನಗಳ ನೂತನ ಬೋಧಕ ಆಸ್ಪತ್ರೆ ಉದ್ಘಾಟನೆ

ಬೆಂಗಳೂರು, ನವೆಂಬರ್ 22 (ಕರ್ನಾಟಕ ವಾರ್ತೆ) :

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ನೂತನ ಬೋಧಕ ಆಸ್ಪತ್ರೆಯನ್ನು ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ನವೆಂಬರ್ 24 ರಂದು ಉದ್ಘಾಟಿಸಲಿದ್ದಾರೆ.

ವಿಧಾನಸಭಾ ಸದಸ್ಯ ಡಾ ಶಿವರಾಜ ಪಾಟೀಲ್ ಅವರು ಅಧ್ಯಕ್ಷತೆವಹಿಸಲಿರುವ ಈ ಸಮಾರಂಭದಲ್ಲಿ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರೂ ಆದ ವೈದ್ಯಕೀಯ ಶಿಕ್ಷಣ ಸಚಿವ ಡಾ ಶರಣಪ್ರಕಾಶ್ ಪಾಟೀಲ್ ಅವರೂ ಸೇರಿದಂತೆ ಗಣ್ಯಾತಿಗಣ್ಯರು ಪಾಲ್ಗೊಳ್ಳಲಿದ್ದಾರೆ.

## ಅಂತಿಮ ಆಯ್ಕೆಪಟ್ಟಿ ಪ್ರಕಟ

ಬೆಂಗಳೂರು, ನವೆಂಬರ್ 22 (ಕರ್ನಾಟಕ ವಾರ್ತೆ) :

ಕರ್ನಾಟಕ ಲೋಕಸೇವಾ ಆಯೋಗವು ರಾಜ್ಯ ಅಬಕಾರಿ ಇಲಾಖೆಯಲ್ಲಿನ 332 ಪುರುಷ ಅಬಕಾರಿ ರಕ್ಷಕರ ಮತ್ತು ಮಹಿಳಾ 18 ಅಬಕಾರಿ ರಕ್ಷಕರ ಹುದ್ದೆಗಳಿಗೆ ಆಯ್ಕೆಯಾದ ಅಭ್ಯರ್ಥಿಗಳ ಅಂತಿಮ ಆಯ್ಕೆಪಟ್ಟಿಯನ್ನು ಆಯೋಗದ ವೆಬ್‌ಸೈಟ್ http://kpsc.kar.nic.in ನಲ್ಲಿ ಪ್ರಕಟಿಸಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಮುಖ್ಯಮಂತ್ರಿ ಪ್ರವಾಸ

ಬೆಂಗಳೂರು, ನವೆಂಬರ್ 22 (ಕರ್ನಾಟಕ ವಾರ್ತೆ) :

ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ನವೆಂಬರ್ 24 ರಂದು ರಾಯಚೂರು ಜಿಲ್ಲೆಯಲ್ಲಿ ಪ್ರವಾಸ ಕೈಗೊಳ್ಳಲಿದ್ದಾರೆ. ಅಂದು ಬೆಳಿಗ್ಗೆ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ನೂತನ ಕಟ್ಟಡದ ಉದ್ಘಾಟನಾ ಮತ್ತು ಸಾರ್ವಜನಿಕ ಸಮಾರಂಭದಲ್ಲಿ ಭಾಗವಹಿಸಿ, ಮಧ್ಯಾಹ್ನ ಯರಮರಸ್ ಲೋಕೋಪಯೋಗಿ ಅತಿಥಿ ಗೃಹದ ಉದ್ಘಾಟನೆ ನೆರವೇರಿಸಲಿದ್ದಾರೆ. ಅಲ್ಲದೆ, ರಾಯಚೂರು ಜಿಲ್ಲಾ ಪ್ರಗತಿ ಪರಿಶೀಲನಾ ಸಭೆ ನಡೆಸಿ ಅದೇ ದಿನ ಸಂಜೆ ಬೆಂಗಳೂರಿಗೆ ವಾಪಸ್ಸಾಗಲಿದ್ದಾರೆ.

## ನವೆಂಬರ್ 25 ರಂದು 198 ಆಂಬುಲೆನ್ಸ್‌ಗಳ ಲೋಕಾರ್ಪಣೆ

ಬೆಂಗಳೂರು, ನವೆಂಬರ್ 22 (ಕರ್ನಾಟಕ ವಾರ್ತೆ) :

ಸಾರ್ವಜನಿಕ ಮತ್ತು ಖಾಸಗಿ ಪಾಲುದಾರಿಕೆಯಲ್ಲಿ ಅತ್ಯಂತ ಯಶಸ್ಸನ್ನು ಕಂಡಿರುವ ಆರೋಗ್ಯ ಕವಚ 108 ಉಚಿತ ಆಂಬುಲೆನ್ಸ್ ಸೇವೆಗೆ ನವೆಂಬರ್ 25 ರಂದು ಇನ್ನೂ 198 ಆಂಬುಲೆನ್ಸ್‌ಗಳು ಸೇರ್ಪಡೆಗೊಳ್ಳಲಿದೆ. ಅಲ್ಲದೆ, ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ಈ ಆಂಬುಲೆನ್ಸ್‌ಗಳನ್ನು ಲೋಕಾರ್ಪಣೆ ಮಾಡಲಿದ್ದಾರೆ. ಮೂಲಭೂತ ಸೌಲಭ್ಯಗಳ ಅಭಿವೃದ್ಧಿ ಮತ್ತು ಹಜ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಸಚಿವ ಶ್ರೀ ಆರ್. ರೋಷನ್ ಬೇಗ್ ಅವರು ಅಧ್ಯಕ್ಷತೆ ವಹಿಸಲಿರುವ ಈ ಸಮಾರಂಭದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಶ್ರೀ ಯು. ಟಿ. ಖಾದರ್ ಅವರೂ ಸೇರಿದಂತೆ ಹಲವು ಗಣ್ಯರು ಪಾಲ್ಗೊಳ್ಳಲಿದ್ದಾರೆ.

ಪ್ರಸ್ತುತ ರಾಜ್ಯದಲ್ಲಿರುವ 517 198 ಆಂಬುಲೆನ್ಸ್‌ಗಳ ಜೊತೆಗೆ ಸೇರ್ಪಡೆಯಾಗಲಿರುವ ನೂತನ 198 ಆಂಬುಲೆನ್ಸ್‌ಗಳಿಂದ ರಾಜ್ಯದಲ್ಲಿ ಆರೋಗ್ಯ ಕವಚ 108-ಆಂಬುಲೆನ್ಸ್‌ಗಳ ಸಂಖ್ಯೆ 715 ಕ್ಕೆ ಏರಲಿದೆ.

## ONE DAY WORKSHOP ON ROOF TOP SOLAR PHOTOVOLTAIC POWER SYSTEMS AND NET ENERGY METERING ON NOVEMEBER 29 IN CITY

BENGALURU, NOVEMBER 22 (KARNATAKA INFORMATION ):

Mahatma Gandhi Institute of Rural energy and Development is organizing a one day workshop on **Roof Top Solar Photovoltaic Power System** and Net Energy Metering in association with the Department of Energy at its campus in Jakkur on November 29.

The motto of the workshop is to create awareness and educate the people, who are desirous of installing roof top SPV's so that they are provided all the required information right from procedures, technology, subsidies, types of equipment and materials available in the market with the sole objective of convincing the participants to go ahead and install the systems.

Solar PV rooftop installers will display their products and customers can have direct interaction with them. All those who are interested in installing roof top SPV system and interested in participating in the workshop are welcome and are required to register with MGIRED. Since there is scope for limited participation, **only the 80 persons will be registered on first come first serve basis and will be given an opportunity to participate in the workshop.**

Interested persons may visit MGIRED website: www.mgired.kar.nic.in, or contact email: mgrired@gmail.com or Prof R.S.Verma on his Mobile : 99001 54715 or Mr Pramod, Project Manager on his Mobile: 96205 41453 email: mgrired@gmail.com for further details.

## ನವೆಂಬರ್ 29 ರಂದು ನಗರದಲ್ಲಿ ಮೇಲ್ಛಾವಣಿ "ಸೌರಶಕ್ತಿ ಪಿ.ವಿ. ವಿದ್ಯುತ್ ಘಟಕಗಳು ಮತ್ತು ನೆಟ್ ಮೀಟರಿಂಗ್ ವ್ಯವಸ್ಥೆ" ಕುರಿತ ಒಂದು ದಿನದ ಕಾರ್ಯಾಗಾರ

ಬೆಂಗಳೂರು, ನವೆಂಬರ್ 22 (ಕರ್ನಾಟಕ ವಾರ್ತೆ) :

ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆಯು ಇಂಧನ ಇಲಾಖೆಯ ಸಹಯೋಗದೊಂದಿಗೆ ಮೇಲ್ಛಾವಣಿ "ಸೌರಶಕ್ತಿ ಪಿ.ವಿ. ವಿದ್ಯುತ್ ಘಟಕಗಳು ಮತ್ತು ನೆಟ್ ಮೀಟರಿಂಗ್ ವ್ಯವಸ್ಥೆ" ಕುರಿತ ಒಂದು ದಿನದ ಕಾರ್ಯಾಗಾರವನ್ನು ಜಕ್ಕೂರಿನಲ್ಲಿರುವ ಸಂಸ್ಥೆಯ ಆವರಣದಲ್ಲಿ ನವೆಂಬರ್ 29 ರಂದು ಆಯೋಜಿಸಿದೆ.

ಮೇಲ್ಛಾವಣಿ ಪಿ.ವಿ. ವಿದ್ಯುತ್ ಘಟಕಗಳನ್ನು ಅಳವಡಿಸಲು ಬೇಕಾಗಿರುವ ವಿಧಾನಗಳು, ತಂತ್ರಜ್ಞಾನಗಳು, ಸಹಾಯಧನ, ಮಾರುಕಟ್ಟೆಯಲ್ಲಿ ಲಭ್ಯವಿರುವ ಸಲಕರಣೆಗಳು, ಸಾಲ ಯೋಜನೆಗಳ ಬಗ್ಗೆ ಜಾಗೃತಿ ಮೂಡಿಸುವುದೇ ಈ ಕಾರ್ಯಾಗಾರದ ಉದ್ದೇಶವಾಗಿದೆ.

ತಜ್ಞರು ಹಾಗೂ ಘಟಕಗಳನ್ನು ಅಳವಡಿಸುವವರು ತಮ್ಮ ಉತ್ಪನ್ನಗಳೊಂದಿಗೆ ಈ ಸಂದರ್ಭದಲ್ಲಿ ಹಾಜರಿರುತ್ತಾರೆ. ಶಿಬಿರಾರ್ಥಿಗಳು ನೇರವಾಗಿ ಅವರಿಂದ ಹೆಚ್ಚಿನ ಮಾಹಿತಿಯನ್ನು ಪಡೆಯಬಹುದಾಗಿದೆ. ಮೇಲ್ಛಾವಣಿ ಪಿ.ವಿ. ಘಟಕಗಳನ್ನು ಅಳವಡಿಸಲು ಉತ್ಸುಕರಾಗಿರುವವರು ಈ ಕಾರ್ಯಾಗಾರದಲ್ಲಿ ಭಾಗವಹಿಸಲು ತಮ್ಮ ಹೆಸರುಗಳನ್ನು ನೋಂದಾಯಿಸಿಕೊಳ್ಳಬೇಕಾಗಿದೆ. ಸೀಮಿತ ನೋಂದಣಿಗೆ ಅವಕಾಶವಿರುವುದರಿಂದ, ಮೊದಲು ಬಂದವರಿಗೆ ಆದ್ಯತೆಯ ಮೇರೆಗೆ ಕೇವಲ 80 ಜನರ ನೋಂದಣಿಗೆ ಮಾತ್ರ ಅವಕಾಶವಿದೆ.

ಹೆಚ್ಚಿನ ವಿವರಗಳಿಗೆ ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆಯ ವೆಬ್‌ಸೈಟ್ : www.mgired.kar.nic.in ಅಥವಾ ಇ-ಮೇಲ್ :mgrired@gmail.com ಸಂದರ್ಶಿಸಬಹುದು. ಇಲ್ಲವಾದಲ್ಲಿ ಪ್ರೊ. ಆರ್.ಎಸ್. ವರ್ಮಾ, ಹಿರಿಯ ಪ್ರಬಂಧಕರು ಮೊಬೈಲ್ ಸಂಖ್ಯೆ.99001 54715 ಅಥವಾ ಶ್ರೀ ಪ್ರಮೋದ್, ಯೋಜನಾ ವ್ಯವಸ್ಥಾಪಕರು, ಮೊಬೈಲ್ ಸಂಖ್ಯೆ 96205 41453 ಇವರನ್ನು ಸಂಪರ್ಕಿಸಬಹುದು.

***********

# ಜಲಮಂಥನದಲ್ಲಿ ಸಚಿವ ಎಂ.ಬಿ.ಪಾಟೀಲ
# 'ಸೂಕ್ಷ್ಮ ನೀರಾವರಿಗೆ ಶೇ.90 ಅನುದಾನ ನೀಡಿ'

ನವದೆಹಲಿ, ನ.22:

ಪ್ರತಿಯೊಂದು ಹನಿ ನೀರು ಸದ್ಬಳಕೆಯಾಗುವ ಸೂಕ್ಷ್ಮ ನೀರಾವರಿ ಯೋಜನೆಗೆ ಕೇಂದ್ರ ಸರ್ಕಾರ ಶೇ.90 ರಷ್ಟು ಅನುದಾನ ಒದಗಿಸಬೇಕು. ನೀರಾವರಿ ಯೋಜನೆಗಳಲ್ಲಿ ಗರಿಷ್ಠ 40 ಹೆಕ್ಟೇರ್ ಮಾತ್ರ ಸೂಕ್ಷ್ಮ ನೀರಾವರಿ ಅಳವಡಿಸಬೇಕೆಂಬ ನಿರ್ಬಂಧವನ್ನು ಸಡಿಲಿಸಬೇಕು ಎಂದು ರಾಜ್ಯ ಜಲಸಂಪನ್ಮೂಲ ಸಚಿವ ಎಂ.ಬಿ.ಪಾಟೀಲ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದರು.

ನವದೆಹಲಿಯ ವಿಜ್ಞಾನ ಭವನದಲ್ಲಿ ನಡೆದ 'ಜಲಮಂಥನ' ಸಮಾವೇಶದಲ್ಲಿ ಪಾಲ್ಗೊಂಡು ಮಾತನಾಡಿದ ಅವರು ನೀರಿನ ಉಳಿತಾಯ, ಭೂಮಿ ಸವಳು-ಜವಳು ಆಗುವುದನ್ನು ತಡೆಗಟ್ಟುವ ನಿಟ್ಟಿನಲ್ಲಿ ಸೂಕ್ಷ್ಮ ನೀರಾವರಿ ಪದ್ಧತಿ ಅತ್ಯಂತ ಪರಿಣಾಮಕಾರಿಯಾಗಿದೆ. ವಿಶ್ವದಲ್ಲಿಯೇ ಅತ್ಯಂತ ದೊಡ್ಡದಾದ ಸೂಕ್ಷ್ಮ ನೀರಾವರಿ ಯೋಜನೆಯಾದ ತುಬಚಿ-ಬಬಲೇಶ್ವರ ಏತ ನೀರಾವರಿ, ಸಿಂಗಟಾಲೂರು ಏತ ನೀರಾವರಿ ಹಾಗೂ ಭದ್ರಾ ಮೇಲ್ದಂಡೆ ಯೋಜನೆಯ ಸಂಪೂರ್ಣ ಅಚ್ಚುಕಟ್ಟು ಪ್ರದೇಶದಲ್ಲಿ ಸೂಕ್ಷ್ಮ ನೀರಾವರಿ ಪದ್ಧತಿಯನ್ನು ಅನುಷ್ಠಾನಗೊಳಿಸಲು ಕರ್ನಾಟಕ ಸರ್ಕಾರ ನಿರ್ಧರಿಸಿದೆ. ವಿಶ್ವಕ್ಕೆ ಮಾದರಿಯಾದ ಈ ಯೋಜನೆಗೆ ಕೇಂದ್ರ ಸರ್ಕಾರ ಶೇ.90 ರಷ್ಟು ಅನುದಾನ ಒದಗಿಸಿ ಆರ್ಥಿಕ ಬೆಂಬಲ ನೀಡಬೇಕು ಎಂದು ಕೋರಿದರು.

ಕೇಂದ್ರ ಸರ್ಕಾರದ ಪ್ರಸ್ತುತ ನಿಯಮಾವಳಿ ಪ್ರಕಾರ ಯಾವುದೇ ನೀರಾವರಿ ಯೋಜನೆಯ ಅಚ್ಚುಕಟ್ಟು ಪ್ರದೇಶದ ಶೇ.10 ರಷ್ಟು ಭಾಗದಲ್ಲಿ ಸೂಕ್ಷ್ಮ ನೀರಾವರಿ ಪದ್ಧತಿಯನ್ನು ಅಳವಡಿಸಬಹುದಾಗಿದೆ. ಆದರೆ ಈ ಮಿತಿ 40 ಗರಿಷ್ಠ 40 ಹೆಕ್ಟೇರ್ ಮೀರಬಾರದು. ವಾಸ್ತವವಾಗಿ ಈ ನಿರ್ಬಂಧದಿಂದಾಗಿ ಸೂಕ್ಷ್ಮ ನೀರಾವರಿ ಪದ್ಧತಿಯನ್ನು ವಿಸ್ತರಿಸಲು ಅಡಚಣೆಯಾಗಿದೆ. ಕೃಷ್ಣಾ ಮೇಲ್ದಂಡೆಯಂತ ಬೃಹತ್ ಯೋಜನೆಯ ಅಚ್ಚುಕಟ್ಟು ಪ್ರದೇಶ 11 ಲಕ್ಷ ಹೆಕ್ಟೇರ್‌ಗೆ ಹೋಲಿಸಿದಲ್ಲಿ 40 ಹೆಕ್ಟೇರ್ ಅತ್ಯಂತ ಸಣ್ಣದಾಗುತ್ತದೆ. ಕೇಂದ್ರ ಸರ್ಕಾರ ಈ ನಿರ್ಬಂಧವನ್ನು ಸಡಿಲಿಸಿ ನೀರಾವರಿ ಯೋಜನೆಗಳ ಡಿಪಿಆರ್(ವಿಸ್ತøತ ಯೋಜನಾ ವರದಿ)ಗೆ ಅನುಗುಣವಾಗಿ ಆರ್ಥಿಕ ನೆರವು ನೀಡಬೇಕು ಎಂದರು.

ಪ್ರಸ್ತುತ ಸಿಎಡಿಡಬ್ಲುಎಂ(ಕಮಾಂಡ್ ಏರಿಯಾ ದೇವಲಪ್‌ಮೆಂಟ್ ಆಂಡ್ ವಾಟರ್ ಮ್ಯಾನೇಜಮೆಂಟ್) ಅಡಿಯಲ್ಲಿ ಕೈಗೊಳ್ಳಲಾಗುವ ಯೋಜನೆಗಳಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಅನುದಾನದ ಪ್ರಮಾಣ 50:50

ಎಂದಿದೆ. ಕೇಂದ್ರ ಸರ್ಕಾರ ಈ ಪ್ರಮಾಣವನ್ನು 75:25 ಕ್ಕೆ ಹೆಚ್ಚಿಸಿ ಸೂಕ್ಷ್ಮ ನೀರಾವರಿ ಪದ್ಧತಿಯನ್ನು ಪ್ರೋತ್ಸಾಹಿಸಬೇಕು. ಅದೇ ರೀತಿ ಪ್ರಸ್ತುತ ಸಿಎಡಿಡಬ್ಲುಎಂ ಅಡಿಯಲ್ಲಿ ಕೈಗೊಳ್ಳುವ ಯೋಜನೆ ಕಾಮಗಾರಿಗಳ ಪ್ರತಿ ಯುನಿಟ್ ದರವನ್ನು ಹೆಚ್ಚಿಸಬೇಕು. ಪ್ರಸ್ತುತ ಈ ಯೋಜನೆಯಡಿ ಪ್ರತಿ ಯುನಿಟ್‌ಗೆ ಅಂದರೆ ಹೆಕ್ಟೇರ್‌ಗೆ 25 ಸಾವಿರ ರೂ. ಇದ್ದು ಅದನ್ನು 35 ಸಾವಿರ ರೂ. ವರೆಗೆ ಹೆಚ್ಚಿಸಬೇಕು ಎಂದರು.

ಸಿಎಡಿ ಯೋಜನೆಯಡಿ ಕೈಗೊಳ್ಳುವ ಕಾಮಗಾರಿಗಳಿಗೆ ಕೇಂದ್ರ ಸರ್ಕಾರದಿಂದ ಪ್ರತಿ ವರ್ಷದ ಅನುದಾನದ ಪೂರ್ಣ ಹಣವನ್ನು ಅದೇ ವರ್ಷ ಬಿಡುಗಡೆ ಮಾಡಬೇಕು. ಕೇಂದ್ರ ಸರ್ಕಾರ ರಾಜ್ಯಕ್ಕೆ ಹಿಂದಿನ ವರ್ಷಗಳ ಬಾಕಿ 142.26 ಕೋಟಿ ರೂ. ಬರಬೇಕಾಗಿದೆ. ಆದರೆ ಕಳೆದ ಆಗಸ್ಟ್‌ನಲ್ಲಿ ಕೇಂದ್ರ ಸರ್ಕಾರದಿಂದ ಪತ್ರವೊಂದು ಬಂದಿದ್ದು ಸರ್ಕಾರ ಹಿಂದಿನ ಬಾಕಿ ಬಿಡುಗಡೆಗೊಳಿಸುವುದನ್ನು ಪರಿಗಣಿಸದಿರಲು ನಿರ್ಧರಿಸಲಾಗಿದೆ ಎಂದು ತಿಳಿಸಲಾಗಿದೆ. ಒಂದೊಮ್ಮೆ ಕೇಂದ್ರ ಸರ್ಕಾರದಿಂದ ಬಾಕಿ ಅನುದಾನ ಬಿಡುಗಡೆಯಾಗದಿದ್ದಲ್ಲಿ ಸಿಎಡಿ ಕಾಮಗಾರಿಗಳಿಗೆ ತೊಂದರೆಯಾಗುತ್ತದೆ. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಸೆಪ್ಟಂಬರ್ 22 ರಂದು ಕೇಂದ್ರಕ್ಕೆ ಪತ್ರ ಬರೆದು ಬಾಕಿ ಅನುದಾನ ಬಿಡುಗಡೆಗೊಳಿಸಲು ವಿನಂತಿಸಿದೆ ಎಂಬ ಮಾಹಿತಿ ನೀಡಿದರು.

ಆರ್‌ಆರ್‌ಆರ್ ಕಾಮಗಾರಿಗಳಿಗೆ ಈಗ ನೀಡಲಾಗುತ್ತಿರುವ ಶೇ.25 ರಷ್ಟು ಅನುದಾನವನ್ನು ಶೇ.50 ಕ್ಕೆ ಹೆಚ್ಚಿಸಬೇಕು. ಎಫ್.ಎಂ.ಪಿ. ಅನುದಾನವನ್ನು ಶೇ.75 ಕ್ಕೆ ಹೆಚ್ಚಿಬೇಕು ಎಂದರು. ಎಐಬಿಪಿ ಯೋಜನೆಯ ಬದಲಾದ ಮಾರ್ಗಸೂಚಿಗಳು ರಾಜ್ಯದ ಯೋಜನೆಗಳಿಗೆ ಮಾರಕವಾಗಿವೆ. ಈ ಮಾರ್ಗಸೂಚಿಯಂತೆ ಯೋಜನಾ ವೆಚ್ಚದ ಶೇ.50 ರಷ್ಟು ಹಣ ಖರ್ಚಾಗಿರಬೇಕು ಮತ್ತು ಶೇ.50 ರಷ್ಟು ಕಾಮಗಾರಿ ಭೌತಿಕ ಪ್ರಗತಿ ಆಗಿರಬೇಕು ಎಂಬುದಾಗಿದೆ. ಕೃಷ್ಣಾ ಮೇಲ್ದಂಡೆ ಯೋಜನೆ ಸ್ಟೇಜ್–3 ರಂಥ ಬೃಹತ್ ಯೋಜನೆಗಳನ್ನು ಅನುಷ್ಠಾನಗೊಳಿಸುವಾಗ ಭಾರೀ ಮೊತ್ತದ ಬಂಡವಾಳದ ಅಗತ್ಯವಿರುತ್ತದೆ. ಈ ನಿಯಮದಂತೆ ಕೇಂದ್ರ ಸರ್ಕಾರದ ಅನುದಾನ ಕ್ರಿಯಾ ಯೋಜನೆಯ ಶೇ.37.5 ರಷ್ಟು ಮಾತ್ರ. ಅಂದರೆ ಕ್ರಿಯಾ ಯೋಜನೆಯ ಶೇ.50ಕ್ಕೆ ಶೇ.75 ರಷ್ಟು. ರಾಜ್ಯ ಸರ್ಕಾರದಿಂದ ಇಂಥ ಬೃಹತ್ ಯೋಜನೆಗೆ ಆರ್ಥಿಕ ಬೆಂಬಲ ದೊರಕುವುದಿಲ್ಲ. ಹಾಗಾಗಿ ಈ ಹಿಂದಿನ ನಿಯಮಾವಳಿಯಂತೆ ಅನುದಾನ ಒದಗಿಸಬೇಕು ಎಂದರು.

ಕೇಂದ್ರ ಜಲಸಂಪನ್ಮೂಲ ಸಚಿವೆ ಉಮಾ ಭಾರತಿ, ಕೇಂದ್ರ ಸಚಿವ ಸುರೇಶ ಪ್ರಭು, ರಾಜ್ಯ ಸಣ್ಣ ನೀರಾವರಿ ಸಚಿವ ಶಿವರಾಜ ತಂಗಡಗಿ, ಕೇಂದ್ರ ಜಲಸಂಪನ್ಮೂಲ ಇಲಾಖೆ ಹಿರಿಯ ಅಧಿಕಾರಿಗಳು, ನೀರಾವರಿ ತಜ್ಞರು, ಸಿಡಬ್ಲುಸಿ ಅಧಿಕಾರಿಗಳು, ವಿವಿಧ ಸರ್ಕಾರೇತರ ಸಂಸ್ಥೆಗಳ ಪ್ರತಿನಿಧಿಗಳು ಜಲಮಂಥನದಲ್ಲಿ ಪಾಲ್ಗೊಂಡಿದ್ದರು.
ಕೆಪಿಪಿ

ಛಾಯಾಚಿತ್ರ ಶೀರ್ಷಿಕೆ:

ನವದೆಹಲಿಯ ವಿಜ್ಞಾನ ಭವನದಲ್ಲಿ ಆಯೋಜಿಸಲಾಗಿದ್ದ 'ಜಲಮಂಥನ' ಸಮಾವೇಶದಲ್ಲಿ ಕೇಂದ್ರ ಜಲಸಂಪನ್ಮೂಲ ಸಚಿವೆ ಉಮಾ ಭಾರತಿ, ಕೇಂದ್ರ ಸಚಿವ ಸುರೇಶ ಪ್ರಭು, ರಾಜ್ಯ ಜಲಸಂಪನ್ಮೂಲ ಸಚಿವ ಎಂ.ಬಿ.ಪಾಟೀಲ ಮೊದಲಾದವರು ಪಾಲ್ಗೊಂಡಿದ್ದರು. (ಛಾಯಾ ಚಿತ್ರದ ವಿವರ)

## ಪತ್ರಿಕೋದ್ಯಮದಲ್ಲಿ ಡಿಪ್ಲೊಮೊ / ಸ್ನಾತಕೋತ್ತರ ಡಿಪ್ಲೊಮೊ ಪಡೆದ ಪರಿಶಿಷ್ಟ ಜಾತಿಯ ಮತ್ತು ಪರಿಶಿಷ್ಟ ಪಂಗಡದ ಯುವಕ–ಯುವತಿಯರಿಗೆ ಸ್ಥಿರ ಛಾಯಾಗ್ರಹಣದಲ್ಲಿ ಮೂರು ದಿನಗಳ ಕಾರ್ಯಾಗಾರಕ್ಕೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನ

**<u>ಬೆಂಗಳೂರು, ನವೆಂಬರ್ 22 (ಕರ್ನಾಟಕ ವಾರ್ತೆ)</u>** :

ವಾರ್ತಾ ಇಲಾಖೆಯು 2014-145ನೇ ಸಾಲಿನಲ್ಲಿ ವಿಶೇಷ ಘಟಕ ಯೋಜನೆಯಡಿ ಆಸಕ್ತ ಪರಿಶಿಷ್ಟ ಜಾತಿ ಮತ್ತು ಪಂಗಡದ ಪದವೀಧರ ಯುವಕ-ಯುವತಿಯರಿಗೆ ಸ್ಥಿರ ಛಾಯಾಗ್ರಹಣ ಕಾರ್ಯಾಗಾರವನ್ನು ಡಿಸೆಂಬರ್ 2014 ನೇ ಮಾಹೆಯಲ್ಲಿ ನಡೆಸಲು ಇಲಾಖೆಯು ಉದ್ದೇಶಿಸಿದೆ. ಈ ಸಂಬಂಧ ಪರಿಶಿಷ್ಟ ಜಾತಿಯ ಮತ್ತು ಪರಿಶಿಷ್ಟ ಪಂಗಡದ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ.

ತರಬೇತಿ ಅವಧಿ 3 ದಿನಗಳಾಗಿದ್ದು, ಪತ್ರಿಕೋದ್ಯಮದಲ್ಲಿ ಡಿಪ್ಲೊಮೊ ಅಥವಾ ಸ್ನಾತಕೋತ್ತರ ಡಿಪ್ಲೊಮೊ ವ್ಯಾಸಂಗ ಮಾಡಿರುವಂತಹ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು , ಅಭ್ಯರ್ಥಿಗಳ ವಯೋಮಿತಿ 21 ರಿಂದ 35 ವರ್ಷದೊಳಗಿರಬೇಕು.

ತರಬೇತಿಗಾಗಿ ಸಲ್ಲಿಸಿದ ಅಭ್ಯರ್ಥಿಗಳ ಅರ್ಜಿಗಳನ್ನು ಇಲಾಖೆಯು ಪರಿಶೀಲಿಸಿ ಮೆರಿಟ್ ಆಧಾರದ ಮೇಲೆ ಆಯ್ಕೆ ಮಾಡಲಾಗುವುದು.

ಅರ್ಹ ಅಭ್ಯರ್ಥಿಗಳು ಇಲಾಖೆಯ ವೆಬ್‌ಸೈಟ್ " karnatakavarthe.org " ನಿಂದ ಅರ್ಜಿಯನ್ನು ಡೌನ್‌ಲೋಡ್ ಮಾಡಿಕೊಂಡು ಅಥವಾ ತಮ್ಮ ಹೆಸರು, ವಯಸ್ಸು, ವಿಳಾಸ, ವಿದ್ಯಾರ್ಹತೆ, ಜಾತಿ , ಶೇಕಡವಾರು ಅಂಕ ಇತ್ಯಾದಿ ಸ್ವ-ವಿವರಗಳನ್ನು ಬಿಳಿಹಾಳೆಯ ಮೇಲೆ ಬೆರಳಚ್ಚುಗೊಳಿಸಿ ಅಥವಾ ಕೈಯಿಂದ ಬರೆದು, ಭರ್ತಿ ಮಾಡಿ, ಭರ್ತಿ ಮಾಡಿದ ಅರ್ಜಿಯನ್ನು ಸ್ವಯಂ ದೃಢೀಕೃತ ಅಗತ್ಯ ದಾಖಲೆಗಳೊಂದಿಗೆ ದಿನಾಂಕ: 12-12-2014 ರ ಸಂಜೆ 5.00 ಗಂಟೆಯೊಳಗೆ " ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ವಾರ್ತಾ ಸೌಧ, ನಂ. 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು - 560001 " ಇಲ್ಲಿಗೆ ಖುದ್ದಾಗಿ ಅಥವಾ ಅಂಚೆ / ಕೊರಿಯರ್ ಮೂಲಕ " **<u>ಸ್ಥಿರ ಛಾಯಾಗ್ರಹಣ ಕಾರ್ಯಾಗಾರಕ್ಕೆ ಅರ್ಜಿ</u>** " ಎಂದು ಲಕೋಟೆ ಮೇಲೆ ನಮೂದಿಸಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಉಪ ನಿರ್ದೇಶಕರು ( ಚಲನಚಿತ್ರ ), ವಾರ್ತಾ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಬೆಂಗಳೂರು ಇವರನ್ನು ದೂರವಾಣಿ ಸಂಖ್ಯೆ 080- 22028052 / 56 ರ ಮೂಲಕ ಸಂಪರ್ಕಿಸಬಹುದು

ಆರ್‌ಕೆಎಸ್